# ತೆರೆದ ಮನದ ತೂಬಿನಲ್ಲಿ ಉಮ್ಮಳಿಸಿದ ನೆನಪುಗಳು

ಪ್ರದೀಪ್, ‘ಗುರುವಾರ ಬೆಳಿಗ್ಗೆ ನಾನು ಸೈಕಾಲಜಿಸ್ಟ್ ಹತ್ತಿರ ಅಪಾಯಿಂಟ್‌ಮೆಂಟ್ ತಗೊಂಡಿದೀನಿ. ನೀವು ನನ್ನ ಜೊತೆ ಬರಬೇಕು’ ಎಂದಾಗ ಅವನು ಹೌಹಾರಿದ.

‘ಯಾರಿಗೆ?’

‘ಇನ್ಯಾರಿಗೆ, ನಿಮಗೆ?’ ಅವಳು ತಣ್ಣಗೆ ನುಡಿದಳು.

‘ನಿವಿ, ಪ್ರಾಬ್ಲಮ್ ಇರೋದು ನನಗಾ... ಏನು ಮಾತನಾಡುತ್ತಿದ್ದೀ? ನೀನು ತಾನೇ ಹೋಗಬೇಕಾದವಳು?’

‘ನನ್ನಲ್ಲಿ ಪ್ರಾಬ್ಲಮ್ ಕಾಣ್ತಿರೋದೇ ನಿಮ್ಮ ದೊಡ್ಡ ಪ್ರಾಬ್ಲಮ್ ಪ್ರದೀಪ್. ನಿಮಗೆ ಆಪ್ತ ಸಮಾಲೋಚನೆಯ ಅಗತ್ಯ ಇದೆ. ನಿಮ್ಮ ಅನುಮಾನಗಳು ಬಗೆಹರಿಯುವುದರಲ್ಲೇ ಈ ಸಮಸ್ಯೆ ಇತ್ಯರ್ಥವಾಗೋದು. ಇಲ್ಲ ಅನ್ನಬೇಡಿ’.

ಅವಳು ಅನುನಯದ ಸ್ವರದಲ್ಲೆಂದಾಗ ಅವನು ಕಸಿವಿಸಿಗೊಂಡ.

‘ನಿವಿ ನೀನು ಹೋಗಿ ಮಾತನಾಡಿಸು. ನಾನು ಬರುವುದಿಲ್ಲ’.

ಅವನು ತನಗೆ ಸಮಸ್ಯೆ ಇದೆ ಎಂಬ ಮಾತನ್ನು ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಅವನ ದ್ವಂದ್ವ ಅವಳು ಅರ್ಥ ಮಾಡಿಕೊಂಡವಳಂತೆ, ‘ಸೈಕಾಲಜಿಸ್ಟ್ ಹತ್ತಿರ ಹೋಗುವುದಕ್ಕೆ ಅವಮಾನ ಪಡುವಂಥದ್ದು ಏನೂ ಇಲ್ಲ. ಈಗ ಇದು ಕಾಮನ್. ನಿಮ್ಮ ಸಮಸ್ಯೆಗೆ ಇದೊಂದು ಸ್ಪಷ್ಟತೆ ಕೊಡುತ್ತದೆ. ನಿಮ್ಮನ್ನು ಈ ಸಿಕ್ಕಿನಿಂದ ಬಿಡಿಸಲೇ ಬೇಕಿದೆ. ಪ್ರದೀಪ್ ನೀವು ಇಲ್ಲ ಎನ್ನುವ ಹಾಗಿಲ್ಲ’ ಎಂದು ಅವಳು ದೃಢವಾದ ಸ್ವರದಲ್ಲೆಂದಾಗ ಪ್ರದೀಪನಿಗೆ ಎದುರಾಡಲಾಗಲಿಲ್ಲ. ಅವನೊಳಗೆ ನಿಜಕ್ಕೂ ಈಗ ಗೊಂದಲ ಸೃಷ್ಟಿಯಾಗಿತ್ತು. ನಿವೇದಿತಾ ಈಗ ವರ್ತಿಸುವುದು ನೋಡಿದರೆ ಅವಳು ಈ ಸಮಸ್ಯೆಯಲ್ಲಿರುವುದು ಅವಳಲ್ಲ, ತಾನು ಎಂದೇ ನಂಬಿದಂತಿದೆ. ಅವಳು ಇದನ್ನು ಬಗೆಹರಿಸುವ ನಿಟ್ಟಿನಲ್ಲಿ ಇಂಥ ಒಂದು ಹೆಜ್ಜೆ ಇರಿಸಿರಬೇಕಾದರೆ, ಅವಳು ನಿಜಕ್ಕೂ ಮಾನಸಿಕವಾಗಿ ಆರೋಗ್ಯಕರಳಾಗಿದ್ದಾಳೆಯೇ, ಸಮಸ್ಯೆ ತನ್ನಲ್ಲೇ ಇದೆಯೇ? ತಾನು ನೋಡುತ್ತಿರುವ, ಕಲ್ಪಿಸುತ್ತಿರುವುದು ಅತಿರೇಕವಾಗಿದೆಯೇ? ಅವಳು ತಿಳಿಸಿದಂತೆ ಮಾನಸಿಕ ಸಮಸ್ಯೆ ತನ್ನೊಳಗೆ ಇರುವುದೇ? ತಮ್ಮಿಬ್ಬರಲ್ಲಿ ಯಾರು ಸರಿ, ಯಾರು ತಪ್ಪು?’

ಪ್ರದೀಪ ತಲೆಗೆ ಕೈಹೊತ್ತು ಕುಳಿತುಕೊಂಡ.

ಮರುದಿನ ಮೈಸೂರಿನಿಂದ ಕೃತ್ತಿಕಾ ಕರೆ ಮಾಡಿ ಮಾತನಾಡಿಸಿದಳು, ‘ಬಾವ, ನಾನು ನಿವಿಯ ಕಸಿನ್ ಕೃತ್ತಿಕಾ. ನೆನಪಾಯಿತಾ?’ ಎಂದಾಗ ಬೇಗುದಿಯಲ್ಲಿ ಬೇಯುತ್ತಿದ್ದ ಪ್ರದೀಪನ ಮನಸ್ಸಿಗೆ ಆಸರೆ ಸಿಕ್ಕಂತಾಗಿತ್ತು.

‘ಹೇಳಿ ಕೃತ್ತಿಕಾ, ನೀವು ಕರೆ ಮಾಡಿದ್ದು ನಿಜಕ್ಕೂ ನನಗೆ ಉಪಕಾರವಾಯಿತು. ನಾನು ನಿಮ್ಹತ್ರ ಏನೋ ಹೇಳಬೇಕಿತ್ತು’ ಎಂದ.

ಅಲ್ಲಿಂದ ಹೋದ ನಂತರ ನಡೆದ ಸಂಗತಿಗಳನ್ನೆಲ್ಲಾ ಆಕೆಯ ಮುಂದೆ ಅರುಹಿದ. ಸೈಕಾಲಜಿಸ್ಟ್ ಹತ್ತಿರ ಆಕೆ ಸಮಯ ನಿಗದಿಪಡಿಸಿರುವುದನ್ನೂ ತಿಳಿಸಿದ.

